**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ವಿಜಯಪುರ ಇವರ ನ್ಯಾಯಾಲಯ**

**ಸ್ಪೆಶಲ್ (ಎನ್.ಡಿ.ಪಿ.ಎಸ್.)ಕೇಸ್ ನಂ.08/2021**

**ಪಿಡಬ್ಲ್ಯೂ- 04 (ಸಿಡಬ್ಲ್ಯೂ-9 )**

ಸಾಕ್ಷಿದಾರರ ಹೆಸರು : ಕಾಶಿನಾಥ ಹಿರಣ್ಣಿ

ತಂದೆ/ಗಂಡನ ಹೆಸರು: ಕಲ್ಲಪ್ಪ

ವಯಸ್ಸು : 32 ವರ್ಷ

ಉದ್ಯೋಗ : ಸಿಪಿಸಿ 524, ಜಳಕಿ ಪಿ.ಎಸ್

ವಾಸಸ್ಥಳ : ಜಳಕಿ

**ಸಾಕ್ಷಿಗೆ ಇಂದು ದಿನಾಂಕ :- 18/06/2024 ರಂದು ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆ :- ಸರಕಾರಿ ಅಭಿಯೋಜಕರವರಿಂದ.**

ನಾನು 2011 ರಿಂದ 2018 ರವರೆಗೆ ಚಡಚಣ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಪೇದೆ ಆಗಿ ಸೇವೆ ಸಲ್ಲಿಸಿದ್ದೇನೆ.

2. ದಿಃ 02.03.2018 ರಂದು ಸಂಜೆ 5.00 ಗಂಟೆಗೆ ಚಾಸಾ-1 ರವರು ನನಗೆ ಫೋನ ಕರೆ ಮಾಡಿ, ನನಗೆ ಗಸಗಸ ತೊಗಟೆ ರೇಡ ಮಾಡುವುದೇ ಇದೆ ಬನ್ನಿ ಅಂತ ತಿಳಿಸಿದರು. ಆ ಮೇರೆಗ ನಾನು ಠಾಣೆಗೆ ಬಂದೆ. ಅಲ್ಲಿ ಚಾಸಾ-1 ರವರು ನನಗೆ ಚಡಚಣದ ಸ್ಪೇಶಲ್ ತಹಶೀಲ್ದಾರ ಹಾಗೂ ಪತ್ರಾಂತಿಕ ಅಧಿಕಾರಿಗಳಾದ ಚಡಚಣ ಪಟ್ಟಣ ಪಂಚಾಯಿತಿ ವೈಧ್ಯಾಧಿಕಾರಿಗಳನ್ನು ಕರೆದುಕೊಂಡು ಬರಲು ತಿಳಿಸಿದರು. ಆ ಮೇರೆಗೆ ನಾನು ಚಾಸಾ-13 ವೈಧ್ಯರು ಹಾಗೂ ತಶಹಶೀಲ್ದಾರವರಿಗೆ ಠಾಣೆಗೆ ಕರೆದುಕೊಂಡು ಬಂದು ಚಾಸಾ-1 ರವರ ಮುಂದೆ ಹಾಜರು ಪಡಿಸಿದೆ. ಆಗ ಚಾಸಾ-1 ರವರು ತಹಶಿಲ್ದಾರ, ಚಾಸಾ-13 ಹಾಗೂ

ನಮ್ಮ ಸಿಬ್ಬಂದಿ ಅವರು ದುಮ್ಮನಾಳಕ್ಕೆ ಗಸಗಸೆ ತೊಗಟೆ ರೇಡ ಮಾಡಲು ಹೋಗಬೇಕಾಗಿದೆ ಅಂತ ಹೇಳಿದರು. ನಂತರ ನಾವು ಎಲ್ಲರು ಸೇರಿ ದುಮ್ಮಕ್ಕನಾಳಕ್ಕೆ ಹೊರೆಟೆವು. ಆ ರೀತಿ ಹೋಗುವ ದಾರಿಯಲ್ಲಿ ದೇವರನಿಂಬರಗಿ ಗ್ರಾಮದಲ್ಲಿ ಚಾಸಾ-1 ರವರು ನನಗೆ ಫೋಟೋಗ್ರಾಪರ್ ಮತ್ತು ತೂಕ ಮಾಡುವವರಿಗೆ ಕರೆದುಕೊಂಡು ಬಾ ಅಂತ ಹೇಳಿದರು. ಆ ಮೇರೆಗೆ ನಾನು ಚಾಸಾ-4 ಅಬ್ದುಲ್ ಮತ್ತು 5 ರಮೇಶ್ ಪವಾರ್ ಎಂಬುವವರಿಗೆ ಕರೆದುಕೊಂಡು ಬಂದೆ. ಚಾಸಾ-1 ರವರು ಚಾಸಾ-5 ರವರಿಗೆ ಕ್ಯಾಮೇರ್ ತೆಗೆದುಕೊಂಡು ಬರಲು ಹೇಳಿದರು. ಚಾಸಾ-1 ರವರು ಚಾಸಾ-4 ರವರಿಗೆ ತೂಕದ ಮಶೀನ್ ತರಲು ಹೇಳಿದರು. ಆ ಮೇರೆಗೆ ಚಾಸಾ-5 ರವರು ಕ್ಯಾಮೇರ್ ಹಾಗೂ ಚಾಸಾ-4 ರವರು ತೂಕದ ಯಂತ್ರ ತೆಗೆದುಕೊಂಡು ಬಂದು. ನಂತರ ನಾವು ದುಮಕ್ಕನಾಳ ಗ್ರಾಮಕ್ಕೆ ಹೋದೆವು. ನಾವು ದುಮ್ಮಕ್ಕನಾಳ ಗ್ರಾಮದ ಸೋಮ ಮೇಗು ಚವಾಹ್ಣ ಎಂಬುವವರ ತೋಟದ ಹತ್ತೀರ ಹೋಗಿ ನೋಡಿದೆವು. ಅಲ್ಲಿ ಇಬ್ಬರು ವ್ಯಕ್ತಿಗಳು ಇದ್ದರು, ಅವರು ಗಸಗಸೆ ತೊಗಟೆ ಕ್ರೂಸರ್ ವಾಹನದಲ್ಲಿ ಹಾಕುತ್ತಿದ್ದರು. ನಂತರ ಚಾಸಾ-1 ರವರು ರೇಡ್ ಮಾಡಿದರು. ನಾವು ಅವರ ಜೊತೆಯಲ್ಲಿ ಇದ್ದೆವು. ಅಲ್ಲಿ ಗಸಗಸೆ ತೊಗಟೆ ತೂಕ ಮಾಡಿದರು. ಅವು 7 ಚೀಲ್ ಗಳು ಇದ್ದವು. ಅಲ್ಲಿ ಚಾಸಾ-1 ರವರು ಅಲ್ಲಿದ್ದ ಇಬ್ಬರನ್ನು ಹಿಡಿದುಕೊಂಡರು. ಚಾಸಾ-1 ರವರು ಅವರ ಹೆಸರು ಕೇಳಲಾಗಿ ಒಬ್ಬ ತನ್ನ ಹೆಸರು

ಸೋಮು ಮೇಗು ಚವಾಹ್ಣ ಅಂತ, ಇನ್ನೊಬ್ಬನು ಸುನೀಲ ಪವಾರ್ ಅಂತ ಹೇಳಿದನು. ಆ 7 ಚೀಲ್ ತೂಕ ಮಾಡಲಾಗಿ ಅದರ ಒಟ್ಟು ತೂಕ 224 ಕೆ.ಜಿ. ಆಯಿತು. ಪ್ರತ್ಯೇಕವಾಗಿ ತೂಕ ಎಷ್ಟು ಇತ್ತು ಎಂಬ ಪ್ರಶ್ನೆಗೆ ಸಾಕ್ಷಿಯು ನಾವು ಅವಾಗ ಸೈಡ ಅಲ್ಲಿ ಇದ್ದೆವು ಅಂತ ಹೇಳುತ್ತಾರೆ. ನಂತರ ಆ ಚೀಲ್ ಗಳನ್ನು ಠಾಣೆಗೆ ತೆಗೆದುಕೊಂಡು ಬಂದೆವು. ಅಲ್ಲಿ ಇದ್ದ ಇಬ್ಬರು ಜನ ವ್ಯಕ್ತಿಗಳು ಈ ದಿನ ನ್ಯಾಯಾಲಯದಲ್ಲಿ ಹಾಜರಿದ್ದು ಅವರನ್ನು ನೋಡಿ ಗುರುತಿಸಿರುತ್ತೇನೆ. ನಾನು ಈ ಬಗ್ಗೆ ಹೇಳಿಕೆ ಕೊಟ್ಟಿದ್ದೆ. ಅಲ್ಲಿ ಮೇಲೆ ಹೇಳಿದ್ದನ್ನು ಹೊರತುಪಡೆಸಿ ಬೇರೆ ಏನು ನಡೆದಿಲ್ಲ.

*(ಸರಕಾರಿ ಅಭಿಯೋಜಕರು ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಯಿತು.)*

**ಪಾಟೀ ಸವಾಲುಃ-ಸರಕಾರಿ ಅಭಿಯೋಜಕರವರಿಂದ**

3. ನಾನು ಚಾಸಾ-3 ರವರ ಕಛೇರಿಗೆ ಹೋದಾಗ ಚಾಸಾ-2 ರವರು ಸಹ ಅವರನ್ನು ಸಹ ನಾನು ಕರೆದುಕೊಂಡು ಬಂದಿದ್ದೆ ಎಂದರೆ ಸರಿ. ಆ ಜಮೀನು ಹತ್ತೀರ ಹೋಗಿ ನೋಡಿದಾಗ ಒಬ್ಬ ವ್ಯಕ್ತಿ ಕ್ರೂಸರ್ ಇಂದ ಚೀಲ್ ಕೊಡುತ್ತಿದ್ದ ಹಾಗೂ ಇನ್ನೊಬ್ಬ ವ್ಯಕ್ತಿ ಅದನ್ನು ಕೆಳಗೆ ಇಡುತ್ತಿದ್ದ ಎಂದರೆ ಸರಿ. ನಂತರ ನಾವೆಲ್ಲರೂ ಸೇರಿ ಅವರನ್ನು ಗಿರಾವು ಹಾಕಿದೆವು ಎಂದರೆ ಸರಿ. ಅಲ್ಲಿ ಸಿಕ್ಕ ಚೀಲ ತೂಕ ಮಾಡಲಾಗಿದ ಮೊದಲನೆ ಚೀಲ್ 24 ಕೆ. ಜಿ 500 ಗ್ರಾಂ ಆಯಿತು. 2 ನೇ ಚೀಲ್ 13 ಕೆಜಿ 500 ಗ್ರಾಂ ಆಯಿತು, 3 ನೇ ಚೀಲ 9

ಕೆಜಿ 250 ಗ್ರಾಂ ಆಯಿತು, 4 ನೇ ಚೀಲ 25 ಕೆಜಿ, 5 ನೇ ಚೀಲ 25 ಕೇಜಿ 250 ಗ್ರಾಂ ಆಯಿತು, 6 ನೇ ಚೀಲ್ 24 ಕೆಜಿ ಆಯಿತು, 7 ನೇ ಚೀಲ್ 3 ಕೆಜಿ ಆಯಿತು ಎಂದರೆ ಸರಿ. ಆ 7 ಚೀಲ್ ಸೇರಿ ಒಟ್ಟು 124 ಕೆಜಿ ಆಯಿತು ಎಂದರೆ ಸರಿ. ಆ ದಿನ ಪ್ರತಿಯೊಂದು ಚೀಲದಿಂದ ತಲಾ 500 ಗ್ರಾಂ ರಷ್ಟು ಸ್ಯಾಂಪಲ ಅನ್ನು ತೆಗೆದರು ಎಂದರೆ ಸರಿ. ಆ ದಿನ ತೆಗೆದ ಒಂದು ಸ್ಯಾಂಪಲ್ ಪೈಕಿ ನನಗೆ ತೋರಿಸಿದ ಒಂದು ಸ್ಯಾಂಪಲ ಆಗಿದೆ ಆ ಸ್ಯಾಂಪಲ್ ಈಗಾಗಲೇ ಎಮ್.ಒ.1 ಎಂದು ಗುರುತಿಸಲಾಗಿದೆ. ನಾನು ಸ್ಯಾಂಪಲ ಗಳನ್ನು ತೆಗೆದುಕೊಂಡು ಹೋಗಿ ಎಫಎಸ್ಎಲ್ ಕಛೇರಿಗೆ ಕೊಟ್ಟಿದ್ದೇನೆ ಎಂದರೆ ಸರಿ. ಈಗ ನನಗೆ ತೋರಿಸಿದ ಪತ್ರ ನಾನು ಚಡಚಣ ಪಿಎಸ್ಐ ಅವರಿಗೆ ಕೊಟ್ಟ ಪತ್ರ ಆಗಿದೆ ಎಂದರೆ ಸರಿ. ಅದನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿ.ಪಿ.5 ಹಾಗೂ ಸಾಕ್ಷಿಯ ರುಜು ಅನ್ನು ನಿ.ಪಿ.5(ಎ) ಎಂದು ಗುರುತಿಸಲಾಯಿತು. ಈಗ ನನಗೆ ತೋರಿಸಿದ ನಿ.ಪಿ.3 ಫೋಟೋ ದಾಳಿ ಕಾಲಕ್ಕೆ ತೆಗೆದ ಫೋಟೋ ಆಗಿದೆ ಎಂದರೆ ಸರಿ.

**ಪಾಟೀ ಸವಾಲು:- ಶ್ರೀ.ಎ.ಟಿ.ಬಿ., ವಕೀಲರಿಂದ ಆರೋಪಿತರ ಪರ**

**5.** ನಮ್ಮ ಠಾಣೆಯಲ್ಲಿ ಎಸ್ ಎಚ್ ಡಿ ಇಡುತ್ತಾರೆ ಎಂದರೆ ಸರಿ. ನಮ್ಮ ಠಾಣೆಯಿಂದ ಚಾಸಾ-3 ರವರ ಕಛೇರಿ 500 ಮೀಟರ್ ದೂರದಲ್ಲಿದೆ. ನಾನು ಈ ಪ್ರಕರಣಕ್ಕೆ ಸಂಬಂದಪಟ್ಟಂತೆ ಯಾವುದೇ ಪಂಚರನ್ನು ಕರೆದುಕೊಂಡು ಬಂದಿಲ್ಲ ಎಂದರೆ ಸರಿಯಲ್ಲ.

ಚಾಸಾ-13 ರವರನ್ನು ಕರೆಯಲು ನಾನೇ ಹೋಗಿದ್ದೆ. ನಾನು ಚಾಸಾ-13 ರವರನ್ನು ಕರೆಯಲು ಸಂಜೆ 5.15 ಗಂಟೆಗೆ ಹೋಗಿದ್ದನು. ಚಾಸಾ-13 ರವರು ಠಾಣೆಗೆ ಬಂದಾಗ 5.30 ಗಂಟೆ ಆಗಿತ್ತು. ನಾನು ಚಾಸಾ-13 ರವರಿಗೆ ನೊಟೀಸ್ ಅಥವಾ ಪತ್ರ ಕೊಟ್ಟಿಲ್ಲ. ನನಗೆ ಚಾಸಾ-1 ರವರು ಚಾಸಾ-13 ರವರನ್ನು ಕರೆಯಸಲು ಸಂಜೆ 5.00 ಗಂಟೆಗೆ ಹೇಳಿದ್ದರು. ನಾವು ಆ ದಿನ ರೇಡ್ ಮಾಡಲು ಕುರಿತು ಠಾಣೆ ಬಿಟ್ಟಾಗ ಸಮಯ 6.00 ಗಂಟೆ ಆಗಿತ್ತು. ಆ ದಿನ ನಾವು ಒಂದು ಜೀಪ ನಿಂದ ಹೊದೆವು. ನಾವು ಎಲ್ಲರೂ ಒಂದೇ ಜೀಪಿ ನಲ್ಲಿ ಹೊದೆವು ಬೇರೆ ವಾಹನ ತೆಗೆದುಕೊಂಡು ಹೋಗಿಲ್ಲ. ನಾನು ತನಿಖಾಧಿಕಾರಿ ಅವರ ಮುಂದೆ ಕೊಟ್ಟ ಹೇಳಿಕೆಯಲ್ಲಿ ''ಹಾಗೂ ಪತ್ರಾಂತಿಕ ಅಧಿಕಾರಿ ಕಟವಟಿಗಿ ------ ಬಾತ್ಮಿ ಬಂದ ಜಾಗಕ್ಕೆ ಹೊರೆಟೆವು '' ಮೇರೆಗೆ ಈಗ ನನಗೆ ಓದಿ ಹೇಳಿದ ಮೇರೆಗೆ ಹೇಳಿಕೆ ಕೊಟ್ಟಿಲ್ಲ. ಆ ಹೇಳಿಕೆಯ ಹೇಳಿದ ಭಾಗವನ್ನು ನಿ.ಡಿ.1 ಎಂದು ಗುರುತಿಸಲಾಯಿತು. ದುಮ್ಮಕನಾಳಕ್ಕೆ ಹೋಗಬೇಕಾದರೆ ಎರಡು ದಾರಿ ಇದೆ, ಒಂದು ದಾರಿ ಜೀರಅಳಕ್ಕಲಿಗೆ ಮೇಲಿಂದ ಮತ್ತು ಇನ್ನೊಂದು ಬರಡೋಲ್ ಮೇಲಿಂದ ಇದೆ ಎಂಡಿದರೆ ಸರಿ. ಆ ದಿನ ನಾವು ಜೀರಅಳಕ್ಕಲಿಗೆ ಮಾರ್ಗದಿಂದ ಹೋಗಿದ್ದೆವು. ಜೀರಅಳಕ್ಕಲಿಗೆ ಮೇಲಿಂದ ಹೋದರೆ ಬರಡೋಲ್ ಗ್ರಾಮ ಬರುವುದಿಲ್ಲ ಎಂದರೆ ಸರಿ. ನಾನು ತನಿಖಾಧಿಕಾರಿಗಳಿಗೆ ಕೊಟ್ಟ ಹೇಳಿಕೆಯಲ್ಲಿ '' ನಾವೆಲ್ಲರೂ ಬರಡೋಲ್ ದಾಟಿ '' ಮೇರೆಗೆ

ನನಗೆ ಓದಿ ಹೇಳಿದ ಮೇರೆಗೆ ನಿ.ಡಿ.1(ಎ) ರಂತೆ ಹೇಳಿಕೆ ಕೊಟ್ಟಿಲ್ಲ. ಚಡಚಣದಿಂದ ದುಮ್ಮಕನಾಳ 25 ಕೀ.ಮೀ. ದೂರವಿದೆ. ನಾವು ದುಮ್ಮಕನಾಳ ತಲುಪಿದಾಗ ಸಂಜೆ 7.00 ಗಂಟೆ ಆಯಿತು.

(ಈ ಹಂತದಲ್ಲಿ ನ್ಯಾಯಾಲಯದ ಭೋಜನದ ಸಮಯವಾಗಿದ್ದರಿಂದ ಮುಂದುವರೆದ ಪಾಟೀ ಸವಾಲು ಮುಂದೂಡಲಾಯಿತು.)

*(ನನ್ನ ಉಕ್ತ ಲೇಖನದ ಮೇರೆಗೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).*

ಓ.ಹೇ.ಕೇ. ಸರಿ ಅದೆ,

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ವಿಜಯಪುರ.

**ಇಂದು ಸಾಕ್ಷಿಗೆ ಮಧ್ಯಾಹ್ನ ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.**
**ಮುಂದುರೆದ ಪಾಟೀ ಸವಾಲು:- ಶ್ರೀ.ಎ.ಟಿ.ಬಿ., ವಕೀಲರಿಂದ ಆರೋಪಿತರ ಪರ**

6. ಆ ದಿನ ನಾವು ದೇವರನಿಂಬರಗಿ ಗ್ರಾಮವನ್ನು ತಲುಪಿದಾಗ ಸಂಜೆ 6.00 ಗಂಟೆ ಆಗಿತ್ತು. ಆ ದಿನ ನಾವು ನೇರವಾಗಿ ದೇವರನಿಂಬರಗಿ ಗ್ರಾಮಕ್ಕೆ ಹೋದೆವು. ನಮ್ಮ ಠಾಣೆಯಲ್ಲಿ ಪ್ರತಿದಿನ ರಾತ್ರಿ 8.00 ಗಂಟೆಗೆ ರೋಲಕಾಲ್ ಆಗುತ್ತದೆ ಎಂದರೆ ಸರಿ. ನಾವು

ಆ ಸ್ಥಳದಲ್ಲಿ 45 ನಿಮೀಷದವರೆಗು ಇದ್ದೆವು. ನಾವು ರೇಡ್ ಮುಗಿಸಿಕೊಂಡು ವಾಪಾಸು ಹೋಗಬೇಕಾದರೆ ಸಮಯ ಸಂಜೆ 6.45 ಗಂಟೆ ಆಗಿತ್ತು. ಆ ದಿನ ನಾವು ಆ ದಾಳಿಗೆ ಹೋಗಬೇಕಾದರೆ ಲ್ಯಾಪಟಾಪ ಅಥವಾ ಕಂಪ್ಯೂಟರ ತೆಗೆದುಕೊಂಡು ಹೋಗಿರಲಿಲ್ಲ. ನಿ.ಪಿ.3 ಫೊಟೋದಲ್ಲಿ ಲ್ಯಾಪಟಾಪ್ ಮತ್ತು ಪ್ರಿಂಟರ್ ಕಾಣುವುದಿಲ್ಲ. ಆ ಪಂಚನಾಮೆ ಯನ್ನು ಅಲ್ಲಿ ಕೈಬರವಣಿಗೆಯಲ್ಲಿ ಮಾಡಲಾಗಿದೆ. ಆ ಪಂಚನಾಮೆ ಮಾಡಿ ಮುಗಿಸಲು 45 ನಿಮಿಷ ಬೇಕಾಯಿತು. ಆ ಮಹಜರ ಅನ್ನು ಸಂಜೆ 6.00 ರಿಂದ 6.45 ರವರೆಗೆ ಮಾಡಲಾಯಿತು. ನನಗೆ ಆ ಸ್ಥಳದಲ್ಲಿ ಆರೋಪಿಗೆ ಸೇರಿದ ಹೊಲ ಆಗಲಿ ವಸ್ತಿ ಆಗಲಿ ಕಂಡು ಬಂದಿಲ್ಲ. ನನಗೆ ಆರೋಪಿತರು ಅಲ್ಲಿ ಗಸಗಸೆ ತೊಗಟೆ ಇಳಿಸುವುದು ಕಂಡುಬಂದಿತ್ತು. ಅಲ್ಲಿ ಉಳಿದವರಿಗೆ ಯಾರಿಗೂ ಕರೆಯಿಸುವುದು ಆಗಿರುವುದಿಲ್ಲ. ಆ ದಿನ ಆ 7 ಬ್ಯಾಗಗಳಿಂದ ಪ್ರತ್ಯೇಕವಾಗಿ 7 ಸ್ಯಾಂಪಲ್ ಗಳನ್ನು ತೆಗೆಯಲಾಯಿತು.

7. ದಿಃ 02.03.2018 ರಂದು ಸಂಜೆ 5.00 ಗಂಟೆಗೆ ಚಾಸಾ-1 ರವರು ನನಗೆ ಫೋನ ಕರೆ ಮಾಡಿ, ನನಗೆ ಗಸಗಸ ತೊಗಟೆ ರೇಡ ಮಾಡುವುದೇ ಇದೆ ಬನ್ನಿ ಅಂತ ತಿಳಿಸಿದರು ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಮೇರೆಗ ನಾನು ಠಾಣೆಗೆ ಬಂದೆ , ಅಲ್ಲಿ ಚಾಸಾ-1 ರವರು ನನಗೆ ಚಡಚಣದ ಸ್ಪೇಶಲ್ ತಹಶೀಲ್ದಾರ ಹಾಗೂ ಪತ್ರಾಂತಿಕ ಅಧಿಕಾರಿಗಳಾದ ಚಡಚಣ ಪಟ್ಟಣ ಪಂಚಾಯಿತಿ ವೈಧ್ಯಾಧಿಕಾರಿಗಳನ್ನು

ಕರೆದುಕೊಂಡು ಬರಲು ತಿಳಿಸಿದರು ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಮೇರೆಗೆ ನಾನು ಚಾಸಾ-13 ವೈದ್ಯರು ಹಾಗೂ ತಶಹಶೀಲ್ದಾರವರಿಗೆ ಠಾಣೆಗೆ ಕರೆದುಕೊಂಡು ಬಂದು ಚಾಸಾ-1 ರವರ ಮುಂದೆ ಹಾಜರು ಪಡಿಸಿದೆ. ಆಗ ಚಾಸಾ-1 ರವರು ತಹಶಿಲ್ದಾರ, ಚಾಸಾ-13 ಹಾಗೂ ನಮ್ಮ ಸಿಬ್ಬಂದಿ ಅವರು ದುಮ್ಮನಾಳಕ್ಕೆ ಗಸಗಸೆ ತೊಗಟೆ ರೇಡ ಮಾಡಲು ಹೋಗಬೇಕಾಗಿದೆ ಅಂತ ಹೇಳಿದರು ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ನಾವು ಎಲ್ಲರು ಸೇರಿ ದುಮ್ಮಕ್ಕನಾಳಕ್ಕೆ ಹೊರೆಟೆವು. ಆ ರೀತಿ ಹೋಗುವ ದಾರಿಯಲ್ಲಿ ದೇವರನಿಂಬರಗಿ ಗ್ರಾಮದಲ್ಲಿ ಚಾಸಾ-1 ರವರು ನನಗೆ ಪೊಟೋಗ್ರಾಪರ್ ಮತ್ತು ತೂಕ ಮಾಡುವವರಿಗೆ ಕರೆದುಕೊಂಡು ಬಾ ಅಂತ ಹೇಳಿದರು ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಮೇರೆಗೆ ನಾನು ಚಾಸಾ-4 ಅಬ್ದುಲ್ ಮತ್ತು 5 ರಮೇಶ್ ಪವಾರ್ ಎಂಬುವವರಿಗೆ ಕರೆದುಕೊಂಡು ಬಂದೆ. ಚಾಸಾ-1 ರವರು ಚಾಸಾ-5 ರವರಿಗೆ ಕ್ಯಾಮೇರ್ ತೆಗೆದುಕೊಂಡು ಬರಲು ಹೇಳಿದರು ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-1 ರವರು ಚಾಸಾ-4 ರವರಿಗೆ ತೂಕದ ಮಶೀನ್ ತರಲು ಹೇಳಿದರು. ಆ ಮೇರೆಗೆ ಚಾಸಾ-5 ರವರು ಕ್ಯಾಮೇರ್ ಹಾಗೂ ಚಾಸಾ-4 ರವರು ತೂಕದ ಯಂತ್ರ ತೆಗೆದುಕೊಂಡು ಬಂದು. ನಂತರ

ನಾವು ದುಮಕ್ಕನಾಳ ಗ್ರಾಮಕ್ಕೆ ಹೋದೆವು ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ದುಮ್ಮಕ್ಕನಾಳ ಗ್ರಾಮದ ಸೋಮ ಮೇಗು ಚವಾಹ್ಣ ಎಂಬುವವರ ತೋಟದ ಹತ್ತೀರ ಹೋಗಿ ನೋಡಿದೆವು. ಅಲ್ಲಿ ಇಬ್ಬರು ವ್ಯಕ್ತಿಗಳು ಇದ್ದರು, ಅವರು ಗಸಗಸೆ ತೊಗಟೆ ಕ್ರೂಸರ್ ವಾಹನದಲ್ಲಿ ಹಾಕುತ್ತಿದ್ದರು ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ಚಾಸಾ-1 ರವರು ರೇಡ್ ಮಾಡಿದರು. ನಾವು ಅವರ ಜೊತೆಯಲ್ಲಿ ಇದ್ದೆವು. ಅಲ್ಲಿ ಗಸಗಸೆ ತೊಗಟೆ ತೂಕ ಮಾಡಿದರು. ಅವು 7 ಚೀಲ್ ಗಳು ಇದ್ದವು. ಅಲ್ಲಿ ಚಾಸಾ-1 ರವರು ಅಲ್ಲಿದ್ದ ಇಬ್ಬರನ್ನು ಹಿಡಿದುಕೊಂಡರು. ಚಾಸಾ-1 ರವರು ಅವರ ಹೆಸರು ಕೇಳಲಾಗಿ ಒಬ್ಬ ತನ್ನ ಹೆಸರು ಸೋಮು ಮೇಗು ಚವಾಹ್ಣ ಅಂತ, ಇನ್ನೊಬ್ಬನು ಸುನೀಲ ಪವಾರ್ ಅಂತ ಹೇಳಿದನು ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ 7 ಚೀಲ್ ತೂಕ ಮಾಡಲಾಗಿ ಅದರ ಒಟ್ಟು ತೂಕ 224 ಕೆ.ಜಿ. ಆಯಿತು. ಪ್ರತ್ಯೇಕವಾಗಿ ತೂಕ ಎಷ್ಟು ಇತ್ತು ಎಂಬ ಪ್ರಶ್ನೆಗೆ ಸಾಕ್ಷಿಯು ನಾವು ಅವಾಗ ಸೈಡ ಅಲ್ಲಿ ಇದ್ದೆವು ಅಂತ ಹೇಳುತ್ತಾರೆ. ನಂತರ ಆ ಚೀಲ್ ಗಳನ್ನು ಠಾಣೆಗೆ ತೆಗೆದುಕೊಂಡು ಬಂದೆವು ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಲ್ಲಿ ಇದ್ದ ಇಬ್ಬರು ಜನ ವ್ಯಕ್ತಿಗಳು ಈ ದಿನ ನ್ಯಾಯಾಲಯದಲ್ಲಿ ಹಾಜರಿದ್ದು ಅವರನ್ನು ನೋಡಿ ಗುರುತಿಸಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ

**ಪಿಡಬ್ಲ್ಯೂ- 04 (ಸಿಡಬ್ಲ್ಯೂ-9 )**

ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಆ ದಿನ 6.00 ರಿಂದ 6.45 ರವರೆಗೆ ರೇಡ್ ನಡೆಸಲಾಯಿತು ಅಂತ ಸುಳ್ಳು ಹೇಳುತ್ತಿದ್ದೇನೆಪಿ ಎಂದರೆ ಸರಿಯಲ್ಲ. ನಾನು ನನ್ನ ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ:-ಇಲ್ಲ.**

*(ನನ್ನ ಉಕ್ತ ಲೇಖನದ ಮೇರೆಗೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).*

ಓ.ಹೇ.ಕೇ. ಸರಿ ಅದೆ,

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ವಿಜಯಪುರ.

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ವಿಜಯಪುರ ಇವರ ನ್ಯಾಯಾಲಯ**

**ಸ್ಪೆಶಲ್ (ಎನ್.ಡಿ.ಪಿ.ಎಸ್.)ಕೇಸ್ ನಂ.08/2021**

**ಪಿಡಬ್ಲ್ಯೂ-5 (ಸಿಡಬ್ಲ್ಯೂ- 11)**

ಸಾಕ್ಷಿದಾರರ ಹೆಸರು : ಸಿದ್ದರೂಡ ರೂಗಿ

ತಂದೆ/ಗಂಡನ ಹೆಸರು: ರೇವಪ್ಪ

ವಯಸ್ಸು : 36 ವರ್ಷ

ಉದ್ಯೋಗ : ಸಿಪಿಸಿ 793,(ಅಮಾನತ್ತು) ಚಡಚಣ ಪಿ.ಎಸ್

ವಾಸಸ್ಥಳ : ಹೊರತ್ತಿ.

**ಸಾಕ್ಷಿಗೆ ಇಂದು ದಿನಾಂಕ :- 18/06/2024 ರಂದು ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆ :- ಸರಕಾರಿ ಅಭಿಯೋಜಕರವರಿಂದ.**

ನಾನು 2011 ರಿಂದ 2018 ರವರೆಗೆ ಚಡಚಣ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಪೇದೆ ಆಗಿ ಸೇವೆ ಸಲ್ಲಿಸಿರುತ್ತೇನೆ.

2. ದಿಃ02.03.2018 ರಂದು ಸಂಜೆ 5.00 ಗಂಟೆಗೆ ನಾನು, ಚಾಸಾ-8,9,10 ಹಾಗೂ ಚಾಸಾ-1 ರವರು ನಮ್ಮ ಠಾಣೆಯಲ್ಲಿದ್ದಾಗ, ಚಾಸಾ-1 ರವರು ಚಾಸಾ-9 ರವರಿಗೆ ಕರೆದರು ಹಾಗೂ ಅವರನ್ನು ಇಬ್ಬರು ಜನರನ್ನು ಸರ್ಕಾರಿ ಪಂಚರನ್ನು ಕರೆದುಕೊಂಡು ಬರಲು ತಿಳಿಸಿದರು. ಚಾಸಾ-9 ರವರು 2 ಮತ್ತು 3 ರವರನ್ನು ಕರೆದುಕೊಂಡು ಬಂದರು. ಆ ರೀತಿ ಪಂಚರನ್ನು ಕರೆದುಕೊಂಡು ಬಂದ ನಂತರ ಚಾಸಾ-1 ರವರು ಪಂಚರಿಗೆ ಸಿಬ್ಬಂದಿ ಜನರಿಗೆ ಮಾದಕ ಪದಾರ್ಥ ಅಕ್ರಮವಾಗಿ ತಂದು ಇಟ್ಟಿದ್ದಾರೆ ಎಂದು ಬಾತ್ಮಿ ಬಂದಿದೆ ಅಂತ ಹೇಳಿದರು. ಚಾಸಾ-1 ರವರು ಸಿಪಿಆರ್ ರವರಿಗೆ ಫೋನ್ ಮೂಲಕ ಹಾಗೂ ಡಿವೈಎಸಪಿ

ಅವರಿಗೆ ಇಮೇಲ್ ಮೂಲಕ ರೇಡ್ ಗೆ ಹೋಗಬೇಕಾಗಿದೆ ಅಂತ ತಿಳಿಸಿದರು. ಚಾಸಾ-1 ರವರು ಚಾಸಾ-9 ರವರಿಗೆ ಪತ್ರಾಂತಿಕ ಅಧಿಕಾರಿಯನ್ನು ಕರೆದುಕೊಂಡು ಬರಲು ತಿಳಿಸದರು. ಚಾಸಾ-9 ರವರು ಹೋಗಿ ಚಾಸಾ-13 ರವರಿಗೆ ಕರೆದುಕೊಂಡು ಬಂದರು. ನಂತರ ನಾವು ಸಿಬ್ಬಂದಿ, ಚಾಸಾ-1 ಮತ್ತು ಪಂಚರು ನಮ್ಮ ಇಲಾಖಾ ವಾಹನದಿಂದ ಹಾಗೂ ಚಾಸಾ-13 ರವರು ಖಾಸಗಿ ವಾಹನದಿಂದ ನಮ್ಮ ಠಾಣೆ ಬಿಟ್ಟು, ದೇವರನಿಂಬರಗಿ ಕ್ರಾಸ್ ಹತ್ತೀರ ಬಂದೆವು, ಅಲ್ಲಿ ಚಾಸಾ-1 ರವರು ಚಾಸಾ ಾ9 ರವರಿೆ ತೂಕ ಮಾಡುವವನನ್ನು ಮಾತ್ತು ಪೋಟೋ ತೆಗೆಯುವವನ್ನು ಕರೆದುಕೊಂಡು ಬನ್ನಿ ಅಂತ ಹೇಳಿದರು. ಆ ಮೇರೆಗೆ ಚಾಸಾ-9 ರವರು ತೂಕ ಮಾಡುವವರಾದ ಚಾಸಾ-4 ಹಾಗೂ ಪೋಟೋ ತೆಗೆಯುವವರಾದ ಚಾಸಾ-5 ರವರನ್ನು ಕರೆದುಕೊಂಡು ಬಂದರು. ನಂತರ ಅಲ್ಲಿಂದ ನಾವು ಬಾತ್ಮಿ ಬಂದ ಸ್ಥಳಕ್ಕೆ ಹೋದೆವು, ನಾವು ಸಮೀಪದಲ್ಲಿ ಹೋಗಿ ವಾಚ್ ಮಾಡಿದೆವು. ಅಲ್ಲಿ ಒಂದು ಕ್ರೂಸರ್ ವಾಹನ ಹಾಗೂ ಇಬ್ಬರು ಜನರು ಇದ್ದರು. ಅಲ್ಲಿ ಕ್ರೂಸರ್ ನಲ್ಲಿ ಒಬ್ಬನು ಎತ್ತಿಕೊಡುತ್ತಿದ್ದ, ಇನ್ನೊಬ್ಬನು ಕೆಳಗೆ ಇಡುತ್ತಿದ್ದ. ನಾವು ಅವರನ್ನು ಸುತ್ತು ವರೆದು ರೇಡ್ ಮಾಡಿದೆವು. ಚಾಸಾ-1 ರವರು ಅವರಿಗೆ ಹೇಸರು ಕೇಳಲಾಗಿ ಅದರಲ್ಲಿ ಒಬ್ಬನು ಸೋಮ ಮೇಘು ಚವಾಹ್ಣ ಇನ್ನೊಬ್ಬನು ಸುನೀಲ್ ಕೇಸು ಪವಾರ್ ಅಂತ ಹೇಳಿದನು. ನಂತರ ಅವರಿಗೆ

ಅದರಲ್ಲಿ ಏನು ಇದೆ ಅಂತ ಕೇಳಲಾಗಿ ಗಸಗಸೆ ಬಂಡೆ ಮೇಲಿನ ತೊಗಟೆ ಇವೆ ಅಂತ ಹೇಳಿದರು. ಚಾಸಾ-1 ರವರು ಅವರಿಗೆ ಅವುಗಳನ್ನು ಇಟ್ಟು ಕೊಳ್ಳಲು ಲೈಸನ್ಸ ಅಥವಾ ಪರಮಿಟ್ ಇಟ್ಟುಕೊಂಡಿದ್ದೀರಾ ಅಂತ ಕೇಳಿದರು, ಅದಕ್ಕೆ ಅವರು ಇಲ್ಲ ಅಂತ ಹೇಳಿದರು. ಅವರು ಅವುಗಳನ್ನು ಅಕ್ರಮವಾಗಿ ಮಾರಾಟ ಮಾಡುತ್ತೇವೆ ಅಂತ ಹೇಳಿದರು ಅಲ್ಲಿ 7 ಚೀಲಗಳು ಇದ್ದವು. ಅಲ್ಲಿ ಚೀಲ ಗಳನ್ನು ತೂಕ ಮಾಡಲಾಗಿ 1 ನೇ ಚೀಲ 24 ಕೆಜಿ 500 ಗ್ರಾಂ ಆಯಿತು, 2 ನೇ ಚೀಲ 13 ಕೆ ಜಿ 500 ಗ್ರಾಂ ಆಯಿತು. 3 ನೇ ಚೀಲ 9 ಕೆಜಿ 250 ಗ್ರಾಂ ಆಯಿತು, 4 ನೇ ಚೀಲ 25 ಕೆಜಿ ಆಯಿತು, 5 ನೇ ಚೀಲ 25 ಕೆಜಿ 250 ಗ್ರಾಂ ಆಯಿತು 6 ನೇ 24 ಕೆಜಿ ಆಯಿತು, 7 ನೇ ಚೀಲ 3 ಕೆಜಿ ಆಯಿತು. ಅಲ್ಲಿ ಪಂಚರ ಸಮಕ್ಷಮ ಫೋಟೋ ತೆಗೆಸಿ, ಅವುಗಳನ್ನು ಠಾಣೆಗೆ ತರಲಾಯಿತು. ಆ 7 ಚೀಲಗಳಿಂದ ತಲಾ 500 ಗಾರಂ ಸ್ಯಾಂಪಲ್ ತೆಗೆಯಲಾಯಿತು. ಆ ದಿನ ಅಲ್ಲಿ ಇದ್ದ ಇಬ್ಬರು ಜನರು ಈ ದಿನ ನ್ಯಾಯಾಲಯದಲ್ಲಿ ಇದ್ದಾರೆ ಅವರನ್ನು ನೋಡಿ ಗುರುತಿಸಿದ್ದೇನೆ. ಆ ಸ್ಯಾಂಪಲ ಪ್ಯಾಕೇಟ್ ನೋಡಿದರೆ ಗುರುತಿಸುತ್ತೇನೆ. ಆ ಸ್ಯಾಂಪಲ್ ನೋಡುತ್ತಿದ್ದು ಅದು ಈಗಾಗಲೆ ಎಮ್.ಒ.1 ಎಂದು ಗುರುತಿಸಲಾಗಿದೆ.

**ಪಾಟೀ ಸವಾಲು:- ಶ್ರೀ.ಎ.ಟಿ.ಬಿ., ವಕೀಲರಿಂದ ಆರೋಪಿತರ ಪರ**

3. ನನ್ನ ಮೇಲೆ ಚಡಚಣ ಠಾಣೆಯಲ್ಲಿ ಎರಡು ಪ್ರಕರಣ ದಾಖಲಾಗಿವೆ ಅವು ಎಂದರೆ ಕ್ರೈಮ್ ನಂ.92/2018 ಮತ್ತು 171/2017 ಅಂದರೆ ಸರಿ. ಆ ಎರಡು ಪ್ರಕರಣಗಳಲ್ಲಿ ಚಾಸಾ-1 ರವರು ಸಹ ಆರೋಪಿ ಆಗಿದ್ದಾರೆ ಎಂದರೆ ಸರಿ. ಆ ಪ್ರಕರಣಗಳು ಫೇಕ್ ಎನಕೌಂಟರ ಸಲುವಾಗಿ ಆಗಿದೆ ಅಂದರೆ ಸರಿ. ಚಾಸಾ-1 ಆ ದಿನ ನಮಗೆ ಕರೆಯಿಸಿ ಹೇಳಿದಾಗ ಸಮಯ ಸಂಜೆ 5.00 ಗಂಟೆ ಆಗಿತ್ತು. ಚಾಸಾ-9 ರವರು ಇಬ್ಬರು ಜನ ಪಂಚರು ಠಾಣೆಗೆ ಕರೆದುಕೊಂಡು ಬಂದಾಗ ಸಮಯ ಸಂಜೆ 5.30 ಗಂಟೆ ಆಗಿತ್ತು. ಚಾಸಾ-9 ರವರು ಚಾಸಾ-13 ರವರನ್ನು ಠಾಣೆಗೆ ಕರೆದುಕೊಂಡು ಬಂದಾಗ ಸಮಯ ಸಂಜೆ 5.50 ಗಂಟೆ ಆಗಿತ್ತು. ನಾವು ಠಾಣೆಯನ್ನು ಬಿಟ್ಟಾಗ ಸಮಯ ಸಂಜೆ 6.00 ಗಂಟೆ ಆಗಿತ್ತು. ಆ ಚಡಚಣದಿಂದ ದುಮ್ಮಕನಾಳ ಗ್ರಾಮಕ್ಕೆ ಅಂದಾಜು 12-15 ಕೀ.ಮೀ ದೂರದಲ್ಲಿದೆ. ಚಡಚಣದಿಂದ ದುಮ್ಮಕನಾಳ ಗ್ರಾಮಕ್ಕೆ 25 ಕೀ.ಮೀ ದೂರದಲ್ಲಿದೆ ಎಂದರೆ ಇರಬಹುದು. ದುಮ್ಮಕನಾಳ ಕ್ರಾಸ ಗೆ ಮುಟ್ಟಿದಾಗ ಸಮಯ ಸಂಜೆ 6.25 ಗಂಟೆ ಆಗಿತ್ತು. ಚಾಸಾ-9 ರವರು ಚಾಸಾ-4 ಮತ್ತು 5 ರವರನ್ನು ಕರೆದುಕೊಂಡು ಬಂದಾಗ ಸಮಯ ಸಂಜೆ 6.30 ಗಂಟೆ ಆಗಿತ್ತು. ಆ ದಿನ ನಾವು ನೇರವಾಗಿ ಆ ಸ್ಥಳದ ಹತ್ತೀರ ಹೋದೆವು. ನಾವು ಆ ಹೋದ ಆ ಹೋಲ ಅನೀಲ ಕುಮಾರ್ ತಳಸಂಗಿ ಎನ್ನುವವರಿಗೆ ಸೇರಿತ್ತು. ಆ ಸ್ಥಳದ ಹತ್ತೀರದಲ್ಲಿ ಆರೋಪತರಿಗೆ ಸೇರಿದ ಯಾವುದೇ ಹೊಲ ಆಗಲಿ ಮನೆ ಆಗಲಿ

ಇರುವುದಿಲ್ಲ ಎಂಬುದು ನನಗೆ ಗೊತ್ತಿಲ್ಲ. ನಾವು ಅಲ್ಲಿ ಹೋಗಿ ಆ ಇಬ್ಬರನ್ನು ಹಿಡಿದುಕೊಂಡಾಗ ಸಮಯ ಸಂಜೆ 6.40 ಗಂಟೆ ಆಗಿತ್ತು. ಆ ದಿನ ನಾವು ನಮ್ಮೊಂದಿಗೆ ಲ್ಯಾಪಟಾಪ್ ತೆಗೆದುಕೊಂಡು ಹೋಗಿದ್ದೆವು, ಪ್ರಿಂಟರ್ ತೆಗೆದುಕೊಂಡು ಹೋಗಿರಲಿಲ್ಲ. ಅಲ್ಲಿ ಪ್ರಿಂಟರ್ ನಿಂದ ಯಾವುದೇ ಪ್ರಿಂಟ್ ತೆಗೆಯುವುದು ಆಗಿಲ್ಲ. ನಾವು ಆ ಸ್ಥಳದಲ್ಲಿ ಸಂಜೆ 6.45 ಗಂಟೆವರೆಗೂ ಇದ್ದೆವು. ಆ ಸ್ಥಳದಲ್ಲಿ 6.45 ರಿಂದ 8.45 ರವರೆಗೆ ಪಂಚನಾಮೆ ಮಾಡಲಾಯಿತು. ನಿ.ಪಿ.3 ಫೋಟೋ ಅನ್ನು ರಾತ್ರಿ ಸಮಯದಲ್ಲಿ ತೆಗೆದ ಫೋಟೊ ಅಂದರೆ ಸರಿಯಲ್ಲ. ನಿ.ಪಿ.3 ಫೋಟೋದಲ್ಲಿ ಹಿಂದಿನ ಗಾಡಿ ಹೆಡ ಲೈಟ್ ಹಚ್ಚಿ ಫೋಟೊ ತೆಗೆಯಲಾಗಿದೆ ಎಂದರೆ ಸರಿ. ಅಲ್ಲಿ 6.45 ಗಂಟೆಗೆ ಯಾವುಹಿದೇ ರೇಡ್ ಆಗಿಲ್ಲ ಮತ್ತು ಯಾವುದೇ ಪಂಚನಾಮೆ ಜರುಗಿಸಲಾಗಿಲ್ಲ ಎಂದರೆ ಸರಿಯಲ್ಲ. ನಾನು ಚಾಸಾ-1 ರವರ ಮಾತುಕತೆ ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

4. ದಿಃ02.03.2018 ರಂದು ಸಂಜೆ 5.00 ಗಂಟೆಗೆ ನಾನು, ಚಾಸಾ-8,9,10 ಹಾಗೂ ಚಾಸಾ-1 ರವರು ನಮ್ಮ ಠಾಣೆಯಲ್ಲಿದ್ದಾಗ, ಚಾಸಾ-1 ರವರು ಚಾಸಾ-9 ರವರಿಗೆ ಕರೆದರು ಹಾಗೂ ಅವರನ್ನು ಇಬ್ಬರು ಜನರನ್ನು ಸರ್ಕಾರಿ ಪಂಚರನ್ನು ಕರೆದುಕೊಂಡು ಬರಲು ತಿಳಿಸಿದರು ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-9 ರವರು 2 ಮತ್ತು 3 ರವರನ್ನು ಕರೆದುಕೊಂಡು ಬಂದರು ಎಂದು ಸುಳ್ಳು ಸಾಕ್ಷ್ಯ

ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ರೀತಿ ಪಂಚರನ್ನು ಕರೆದುಕೊಂಡು ಬಂದ ನಂತರ ಚಾಸಾ-1 ರವರು ಪಂಚರಿಗೆ ಸಿಬ್ಬಂದಿ ಜನರಿಗೆ ಮಾದಕ ಪದಾರ್ಥ ಅಕ್ರಮವಾಗಿ ತಂದು ಇಟ್ಟಿದ್ದಾರೆ ಎಂದು ಬಾತ್ಮಿ ಬಂದಿದೆ ಅಂತ ಹೇಳಿದರು ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-1 ರವರು ಸಿಪಿಆರ್ ರವರಿಗೆ ಪೋನ್ ಮೂಲಕ ಹಾಗೂ ಡಿವೈಎಸಪಿ ಅವರಿಗೆ ಇಮೇಲ್ ಮೂಲಕ ರೇಡ್ ಗೆ ಹೋಗಬೇಕಾಗಿದೆ ಅಂತ ತಿಳಿಸಿದರು ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-1 ರವರು ಚಾಸಾ-9 ರವರಿಗೆ ಪತ್ರಾಂತಿಕ ಅಧಿಕಾರಿಯನ್ನು ಕರೆದುಕೊಂಡು ಬರಲು ತಿಳಿಸದರು. ಚಾಸಾ-9 ರವರು ಹೋಗಿ ಚಾಸಾ-13 ರವರಿಗೆ ಕರೆದುಕೊಂಡು ಬಂದರು ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ನಾವು ಸಿಬ್ಬಂದಿ, ಚಾಸಾ-1 ಮತ್ತು ಪಂಚರು ನಮ್ಮ ಇಲಾಖಾ ವಾಹನದಿಂದ ಹಾಗೂ ಚಾಸಾ-13 ರವರು ಖಾಸಗಿ ವಾಹನದಿಂದ ನಮ್ಮ ಠಾಣೆ ಬಿಟ್ಟು, ದೇವರನಿಂಬರಗಿ ಕ್ರಾಸ್ ಹತ್ತೀರ ಬಂದೆವು, ಅಲ್ಲಿ ಚಾಸಾ-1 ರವರು ಚಾಸಾ-9 ರವರಿಗೆ ತೂಕ ಮಾಡುವವನನ್ನು ಮಾತ್ತು ಪೋಟೋ ತೆಗೆಯುವವನ್ನು ಕರೆದುಕೊಂಡು ಬನ್ನಿ ಅಂತ ಹೇಳಿದರು ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಮೇರೆಗೆ ಚಾಸಾ-9 ರವರು ತೂಕ ಮಾಡುವವರಾದ ಚಾಸಾ-4 ಹಾಗೂ ಪೋಟೋ ತೆಗೆಯುವವರಾದ ಚಾಸಾ-5 ರವರನ್ನು ಕರೆದುಕೊಂಡು ಬಂದರು ಎಂದು

ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ಅಲ್ಲಿಂದ ನಾವು ಬಾತ್ಮಿ ಬಂದ ಸ್ಥಳಕ್ಕೆ ಹೋದೆವು, ನಾವು ಸಮೀಪದಲ್ಲಿ ಹೋಗಿ ವಾಚ್ ಮಾಡಿದೆವು. ಅಲ್ಲಿ ಒಂದು ಕ್ರೂಸರ್ ವಾಹನ ಹಾಗೂ ಇಬ್ಬರು ಜನರು ಇದ್ದರು. ಅಲ್ಲಿ ಕ್ರೂಸರ್ ನಲ್ಲಿ ಒಬ್ಬನು ಎತ್ತಿಕೊಡುತ್ತಿದ್ದ, ಇನ್ನೊಬ್ಬನು ಕೆಳಗೆ ಇಡುತ್ತಿದ್ದ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಅವರನ್ನು ಸುತ್ತು ವರೆದು ರೇಡ್ ಮಾಡಿದೆವು. ಚಾಸಾ-1 ರವರು ಅವರಿಗೆ ಹೆಸರು ಕೇಳಲಾಗಿ ಅದರಲ್ಲಿ ಒಬ್ಬನು ಸೋಮ ಮೇಘು ಚವಾಣ ಇನ್ನೊಬ್ಬನು ಸುನೀಲ್ ಕೇಸು ಪವಾರ್ ಅಂತ ಹೇಳಿದನು. ನಂತರ ಅವರಿಗೆ ಅದರಲ್ಲಿ ಏನು ಇದೆ ಅಂತ ಕೇಳಲಾಗಿ ಗಸಗಸೆ ಬಂಡೆ ಮೇಲಿನ ತೊಗಟೆ ಇವೆ ಅಂತ ಹೇಳಿದರು ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-1 ರವರು ಅವರಿಗೆ ಅವುಗಳನ್ನು ಇಟ್ಟು ಕೊಳ್ಳಲು ಲೈಸನ್ಸ ಅಥವಾ ಪರಮಿಟ್ ಇಟ್ಟುಕೊಂಡಿದ್ದೀರಾ ಅಂತ ಕೇಳಿದರು, ಅದಕ್ಕೆ ಅವರು ಇಲ್ಲ ಅಂತ ಹೇಳಿದರು. ಅವರು ಅವುಗಳನ್ನು ಅಕ್ರಮವಾಗಿ ಮಾರಾಟ ಮಾಡುತ್ತೇವೆ ಅಂತ ಹೇಳಿದರು ಅಲ್ಲಿ 7 ಚೀಲಗಳು ಇದ್ದವು ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಲ್ಲಿ ಚೀಲ ಗಳನ್ನು ತೂಕ ಮಾಡಲಾಗಿ 1 ನೇ ಚೀಲ 24 ಕೆಜಿ 500 ಗ್ರಾಂ ಆಯಿತು, 2 ನೇ ಚೀಲ 13 ಕೆ ಜಿ 500 ಗ್ರಾಂ ಆಯಿತು. 3 ನೇ ಚೀಲ 9 ಕೆಜಿ 250 ಗ್ರಾಂ ಆಯಿತು, 4 ನೇ ಚೀಲ 25 ಕೆಜಿ ಆಯಿತು, 5 ನೇ ಚೀಲ 25 ಕೆಜಿ 250 ಗ್ರಾಂ ಆಯಿತು 6 ನೇ 24 ಕೆಜಿ

ಆಯಿತು, 7 ನೇ ಚೀಲ 3 ಕೆಜಿ ಆಯಿತು. ಅಲ್ಲಿ ಪಂಚರ ಸಮಕ್ಷಮ ಫೋಟೋ ತೆಗೆಸಿ, ಅವುಗಳನ್ನು ಠಾಣೆಗೆ ತರಲಾಯಿತು ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ 7 ಚೀಲಗಳಿಂದ ತಲಾ 500 ಗಾರಂ ಸ್ಯಾಂಪಲ್ ತೆಗೆಯಲಾಯಿತು ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ದಿನ ಅಲ್ಲಿ ಇದ್ದ ಇಬ್ಬರು ಜನರು ಈ ದಿನ ನ್ಯಾಯಾಲಯದಲ್ಲಿ ಇದ್ದಾರೆ ಅವರನ್ನು ನೋಡಿ ಗುರುತಿಸಿದ್ದೇನೆ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ:-ಇಲ್ಲ.**

*(ನನ್ನ ಉಕ್ತ ಲೇಖನದ ಮೇರೆಗೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).*

ಓ.ಹೇ.ಕೇ. ಸರಿ ಅದೆ,

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ವಿಜಯಪುರ.